

## ಮತ್ತೆ ಬಂದಿದೆ ಜಾತ್ರೆ

ಮತ್ತೆ ಬಂದಿದೆ ನಮ್ಮೂರ ಜಾತ್ರೆ
ನೀನಿಲ್ಲದೆ ಸಂಭ್ರಮವೆಲ್ಲಿದೆ?
ನಿನಗೆಂದೇ ತಂದಿರುವೆವು
ಈ ಹಸಿ ಹುಲ್ಲನು
ತಿಂದು ಮುಗಿಸು ಎಲ್ಲವನು
ದೇವರಿಗೆ ಬಿಟ್ಟಿರುವರಂತೆ ನಿನ್ನನು
ತುಂಬಾ ದೂರವಂತೆ ಆ ದೇವರೂರು
ಹಸಿವಾಗದಿರಲಿ ನಿನಗೆ ಪಯಣದಲ್ಲಿ
ಹೊಟ್ಟೆ ತುಂಬ ಹುಲ್ಲ ತಿಂದು
ಕಣ್ತುಂಬ ನಿದ್ರೆ ಮಾಡಿ ಬಿಡು
ನಾಳೆ ಬೆಳಗಾದರೆ ನಿನಗೆ ಮಂಗಳ ಸ್ನಾನ
ತಿಲಕವಿಟ್ಟು ಹಣೆಗೆ, ಹಾರ ಹಾಕಿ ಕೊರಳಿಗೆ
ಆರತಿ ಎತ್ತಿ ಕೈ ಮುಗಿಯುತ್ತಾರೆ ಹರಸೆಂದು
ಮರೆಯಲ್ಲಿ ನಿನ್ನ ಕರದೊಯ್ದು
ಹಾಕುತ್ತಾರೆ ನಿನ್ನ ದೇವರ ಮಡಿಲಿಗೆ
ನಾಳೆ ನಮಗೆ ಹಬ್ಬದೂಟ
ಮನೆ ತುಂಬಾ ನೆಂಟರಿಷ್ಟರು
ನೀನೊಬ್ಬನಿರುವುದಿಲ್ಲವೆಂಬ ಕೊರಗು
ಇದ್ದು ಹೋಗು ನಾಳೆ ಒಂದು ದಿನ
ಹಬ್ಬ ಮಾಡಿ ಹೋಗು ನಿನ್ನೂರಿಗೆ

● **ಗೌರಿ ಚಂದ್ರಕೇಸರಿ**

## ಜೀಮೂತವಾಹನ

ಬಾಗಿದ ಕೊಂಬುಗಳು
ರಕ್ಷಿಸಲಾರವು ಗೆಳೆಯ
ಬಲಿ ಕೊಡಲು ಕಾದವರಿಂದ
ತಿನ್ನಿಸಿ ನಿನ್ನನ್ನು ಇನ್ನಷ್ಟು
ಕೊಬ್ಬಿಸಬಹುದಷ್ಟೆ
ನಾವು ಎಳೆಯರು.

ಪ್ರಾಣಿ ಪ್ರಾಣ ಕೇಳುವವ
ದೇವರೆನ್ನುತ್ತೀಯಾ?

ನಮಗಂತೂ ಅನಿಸುತ್ತಿಲ್ಲ
ಸಮಯ ಕಾದು
ಗಂಟು ಸಡಿಲಿಸುತ್ತೇವೆ
ಎಲ್ಲಾದರೂ ಓಡಿಬಿಡು
ಸೂರಾಚೆ ಊರಾಚೆ
ಬಲಿ ಬೇಕಿದ್ದರೆ ನಮ್ಮಲ್ಲೇ
ಒಬ್ಬರನ್ನು ಆರಿಸಿಕೊಳ್ಳಲಿ
ಗರುಡನ ಮನ ಕದಲಿಸುವ
ಜೀಮೂತವಾಹನರಾಗುತ್ತೇವೆ
ಮಾನವರಾಗುತ್ತಾರಾ ನೋಡೋಣ!

● **ತಲಕಾಡು ಶ್ರೀನಿಧಿ**